## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ63/2013

| ಚಾಸಾ ಃ | 1 | ಪ್ರಾಸಾಃ- | 1 |
|---|---|---|---|

- - - - - - - - - - - - - - - - - - - - - - - - - - - - - - -

**ದಿಃ10.06.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, 2 ನೇ ಆರೋಪಿ ನ್ಯಾಯಾಲಯದ ಮುಂದೆ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು 2 ನೇ ಆರೋಪಿ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು ಶ್ರೀ ಎಸ್.ಪಿ.ಕೆ ಆರೋಪಿ ಪರ ವಕೀಲರಿಂದಃ-**

ದಿನಾಂಕ.15.1.2012 ರಂದು ಘಟನೆಯಾಗಿರುತ್ತದೆ. ಸಾವಿತ್ರಿ ನನಗೆ ತಾಯಿಯಾಗಬೇಕು. 1 ಮತ್ತು 2 ನೇ ಆರೋಪಿತರು ನನಗೆ ಅತ್ತೆ ಮಾವ ಆಗಬೇಕು. ನನ್ನ ತಾಯಿ ಆರೋಪಿತರ ವಿರುದ್ದ ವಿಭಾಗಕ್ಕಾಗಿ ದಾವಾ ನಂ.376/2006 ನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ನನ್ನ ತಾಯಿ ದಿ.27.11.2006 ರಂದು ಮೇಮೊ ಸಲ್ಲಿಸಿ ವಜಾ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮೇಮೊದಲ್ಲಿ ಆರೋಪಿತರಿಂದ (ಪ್ರತಿವಾದಿಯರಿಂದ) ಒಂದು ಲಕ್ಷ ರೂಪಾಯಿ ಹಣ ಪಡೆದು ದಾವೆಯನ್ನು ಹಿಂಪಡೆಯುತ್ತಿರುವುದಾಗಿ ನಮೂದಿಸಲಾಗಿದೆ ಎಂದರೆ ಸರಿ. ಸದರಿ ದಾವೆಯನ್ನು

ಹಿಂಪಡೆದ ನಂತರ ಅನೇಕ ವರ್ಷ ಕಳೆದ ನಂತರ ನಾನು ಮತ್ತು ನನ್ನ ತಾಯಿ ಆರೋಪಿತರನ್ನು ಸ್ವತ್ತಿನಲ್ಲಿ ಭಾಗ ಕೊಡುವಂತೆ ಕೇಳಿರುತ್ತೇವೆ ಎಂದರೆ ಸಾಕ್ಷಿಯು ನಾನು ಕೇಳಿರುವುದಿಲ್ಲ, ನನ್ನ ತಾಯಿ ಕೇಳಿರಬಹುದು, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ನನ್ನ ತಾಯಿ ಒಂದು ಲಕ್ಷ ಹಣ ಪಡೆದುಕೊಂಡು ಹಿಂಪಡೆದ ದಾವೆಯನ್ನು ಪುನಃ ಸ್ಥಾಪನೆ ಮಾಡಲು ನೀನೆ ಕಾರಣ ಎಂದು ನನ್ನ ಗಂಡನೊಂದಿಗೆ ಜಗಳ ಮಾಡಿರುತ್ತಾರೆ. ಸದರಿ ದಾವೆಯನ್ನು ಮರುಸ್ಥಾಪನೆಗೋಸ್ಕರ ಮಿಸ್ ನಂ.19/2014 ನ್ನು 2014 ರಲ್ಲಿ ನನ್ನ ತಾಯಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಪಿತ್ರಾರ್ಜಿತ ಸ್ವತ್ತುಗಳ ಕುರಿತಾಗಿ ಆರೋಪಿತರ ವಿರುದ್ಧ ಭಾಗಕ್ಕಾಗಿ ದಾವೆ ಸಲ್ಲಿಸಿದ್ದರು. ಸದರಿ ಪಿತ್ರಾರ್ಜಿತ ಸ್ವತ್ತುಗಳ ಕುರಿತಾಗಿ ನನ್ನ ತಾತ 1 ನೇ ಆರೋಪಿಗೆ ದಾನಪತ್ರದ ಮೂಲಕ ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ಪಿತ್ರಾರ್ಜಿತ ಸ್ವತ್ತುಗಳ ಕುರಿತಾಗಿ ದಾನಪತ್ರ ಇದ್ದಾಗ್ಯೂ ನನ್ನ ತಾಯಿಗೆ ಒಂದು ಲಕ್ಷ ಹಣ ನೀಡಿದ್ದರಿಂದ ಯಾವುದೇ ಭಾಗ ನೀಡುವುದಿಲ್ಲವೆಂದು ಆರೋಪಿತರು ನಮಗೆ ಹೇಳಿದ್ದರಿಂದ ಸದರಿ ಸ್ವತ್ತುಗಳನ್ನು ಆರೋಪಿತರಿಂದ ಪಡೆದುಕೊಳ್ಳುದಕೋಸ್ಕರ ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇವೆಂದರೆ ಸರಿಯಲ್ಲ.

ನನ್ನ ಗಂಡನ ಅಣ್ಣ ಕನಕಪುರದಲ್ಲಿ ವಕೀಲ ವೃತ್ತಿಯನ್ನು ಸಹ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಾಯಿಯ ಪರವಾಗಿ ದಾವೆಗಳನ್ನು ನನ್ನ ಗಂಡನ ಅಣ್ಣ ಇವರೆ ನಡೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

1 ಮತ್ತು 2 ನೇ ಆರೋಪಿತರು ಮನೆಯ ಒಳಗೆ ಬಂದು ಗಲಾಟೆ ಮಾಡುವ ಸಂದರ್ಭದಲ್ಲಿ ಕಾರ್ತಿಕ್ ಮತ್ತು ಕೀರ್ತಿ ಮನೆಯ ಹೊರಗಡೆ ಗೇಟ್ ಹತ್ತಿರ ನಿಂತಿದ್ದರು. ಗಲಾಟೆ ನಡೆದ ಸಂದರ್ಭದಲ್ಲಿ ನಾನು ಸ್ಥಳದಲ್ಲಿಯೇ ಇದ್ದೆ. ನನ್ನ ಅತ್ತೆ ವೀಣಾ ನನ್ನ ಗಂಡನಿಗೆ ಟಿವಿ ರಿಮೋಟ್ನಿಂದ ಹೊಡೆದಿರುತ್ತಾರೆ. ಆರೋಪಿತರು ನಮ್ಮ ಮನೆಗೆ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ, ಯಾವುದೇ ಗಲಾಟೆ ಮಾಡಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಯಾರು ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ.

ದಿ.16.01.2012 ರಂದು ಬೆಳಿಗ್ಗೆ 10:00 ಗಂಟೆ ಸಮಯದಲ್ಲಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬಂದನಂತರ ಠಾಣೆಗೆ ಹೋಗಿ ದೂರು ನೀಡಿರುತ್ತೇವೆ. ದಿ.16.1.2012 ರಂದು ಸಂಜೆ 4:30 ಗಂಟೆಗೆ ಘಟನಾ ಸ್ಥಳಕ್ಕೆ ಪೊಲೀಸರು ಬಂದು ಪಂಚನಾಮೆ ಮಾಡಿರುತ್ತಾರೆ. ಇಬ್ಬರೂ ಪೊಲೀಸರು ಪಂಚನಾಮೆಗೆ ಬಂದಿದ್ದರು, ಅವರ ಹೆಸರು ಮತ್ತು ಹುದ್ದೆ ಹೇಳಲು ಬರುವುದಿಲ್ಲ. ಘಟನಾ ಸ್ಥಳದಲ್ಲಿ ಪಂಚನಾಮೆ ಬರೆದು ನಮ್ಮ ಸಹಿ ಪಡೆದಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಠಾಣೆಯಲ್ಲಿ ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ಪಂಚರಾಗಿ ಜಯರಾಮ್‌ನಾಯಕ್ ಮತ್ತು ಪಳನಿ ಇವರು ಸಹಿ ಮಾಡಿರುತ್ತಾರೆ. ಪಂಚನಾಮೆಗೆ ಬರುವಂತೆ ನಾನೇ ಚಾಸಾ-3 ಮತ್ತು 4 ರವರನ್ನು ಕರೆಸಿಕೊಂಡಿರುತ್ತೇನೆಂದರೆ ಸರಿ. ಸಾಕ್ಷಿಯು ಮುಂದುವರೆದು ಪಕ್ಕದ ಮನೆಯವರಾಗಿದ್ದರಿಂದ ಕರೆಸಿಕೊಂಡಿರುತ್ತೇವೆಂದು ನುಡಿಯುತ್ತಾರೆ. ಯಾವುದೇ ಘಟನೆಯಾಗದೆ ಇದ್ದರೂ ಆರೋಪಿತರು ಗಲಾಟೆ ಮಾಡಿ ಹಲ್ಲೆ ಮಾಡಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಟಿವಿ ರೀಮೋಟ್ ನ್ನು ನಾನು ಠಾಣೆಗೆ ತೆಗೆದುಕೊಂಡು ಹೋಗಿ ಪೊಲೀಸರಿಗೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೊಲೀಸರು ಪಂಚನಾಮೆ ಮಾಡಿ ರೀಮೋಟ್ ನ್ನು ತೆಗೆದುಕೊಂಡು ಹೋಗಿರುತ್ತಾರೆಂದು ನುಡಿಯುತ್ತಾರೆ. ನಾನು ಮತ್ತು ನನ್ನ ಗಂಡ ಪೀತೂರಿ ಮಾಡಿ ಕುಟುಂಬದ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದೂರನ್ನು ಆರೋಪಿತರ ವಿರುದ್ದ ನೀಡಿರುತ್ತೇನೆಂದರೆ ಸರಿಯಲ್ಲ. ಕ್ರಿಮಿನಲ್ ಪ್ರಕರಣ ದಾಖಲಿಸಿದರೆ ಸಿವಿಲ್ ಪ್ರಕರಣದಲ್ಲಿ ರಾಜೀಯಾಗಿ ಆಸ್ತಿ ನೀಡುತ್ತಾರೆ ಎಂಬ ಉದ್ದೇಶದಿಂದ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಘಟನೆಯ ಸಂದರ್ಭದಲ್ಲಿ ಆರೋಪಿತರು ನಮ್ಮ ಮನೆಯ ಹತ್ತಿರ ಬಂದಿರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ :ಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂಃ63/2013**

| | | | |
|---|---|---|---|
| **ಚಾಸಾ ಃ** | **2** | **ಪ್ರಾಸಾಃ-** | **2** |

- - - - - - - - - - - - - - - - - - - - - - - - - - - - - - -

**ದಿಃ10.06.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಮುಂದುವರೆದ ಮುಖ್ಯವಿಚಾರಣೆ ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು ಶ್ರೀ ಎಸ್.ಪಿ.ಕೆ ಆರೋಪಿ ಪರ ವಕೀಲರಿಂದಃ-**

ಸಾವಿತ್ರಿ ನನ್ನ ಅತ್ತೆ ಎಂದರೆ ಸರಿ. (ನನ್ನ ಹೆಂಡತಿಯ ತಾಯಿ). ನನ್ನ ಅತ್ತೆಗೆ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಸದರಿ ಘಟನೆ ಸಿವಿಲ್ ದಾವೆಗೆ ಸಂಬಂಧಿಸಿದಂತೆ ಆಗಿರುತ್ತದೆ ಎಂದು ದೂರಿನಲ್ಲಿ ನಮೂದಿಸಲಾಗಿದೆ ಎಂದರೆ ಸರಿ. 2006 ರಲ್ಲಿ ನನ್ನ ಅತ್ತೆ ಆಸಲು ದಾವೆ ನಂ.370/2006 ನ್ನು ವಿಭಾಗಕ್ಕಾಗಿ ಆರೋಪಿತರ ವಿರುದ್ದ ಸಲ್ಲಿಸಿರುತ್ತಾರೆಂದರೆ ಸರಿ. ನನ್ನ ಮದುವೆ 2005 ರಲ್ಲಿ ಆಗಿರುತ್ತದೆ. ಸದರಿ ನನ್ನ ಅತ್ತೆಯ ಕುಟುಂಬಕ್ಕೆ ಸಂಬಂಧಿಸಿದ ಸ್ವತ್ತುಗಳ ಕುರಿತಾಗಿ ನನ್ನ ಅತ್ತೆಯ ತಂದೆ ಸ್ವತ್ತುಗಳನ್ನು ದಾನಪತ್ರದ ಮೂಲಕ 1 ನೇ ಆರೋಪಿಗೆ ನೀಡಿದ್ದು ನನಗೆ ಗೊತ್ತಿರುವುದಿಲ್ಲ. ಅಲ್ಲದೆ ನನ್ನ ಅತ್ತೆ ಒಂದು ಲಕ್ಷ ಹಣವನ್ನು ಆರೋಪಿತರಿಂದ ಪಡೆದು ದಾವೆಯನ್ನು ಹಿಂಪಡೆದಿರುವ ವಿಚಾರ ನನಗೆ ಗೊತ್ತಿಲ್ಲ. ದಾವೆಯನ್ನು ಹಿಂಪಡೆದ ನಂತರ ನನ್ನ ಹೆಂಡತಿ ಮತ್ತು ನನ್ನ ಅತ್ತೆ ಸ್ವತ್ತಿನಲ್ಲಿ ವಿಭಾಗ ನೀಡುವಂತೆ ಆರೋಪಿತರನ್ನು ಕೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನನ್ನ ಅತ್ತೆಗೆ ಕುಟುಂಬದ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

1 ನೇ ಆರೋಪಿ ನನ್ನ ಎಡಕಪಾಲಕ್ಕೆ ಕೈಯಿಂದ ಹೊಡೆದಿರುತ್ತಾರೆ. ಆರೋಪಿತರು ಬಂದು ಗಲಾಟೆ ಮಾಡಿ ನನಗೆ ಹೊಡೆದಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಯಾರು ಘಟನೆಯಾದ ದಿನ ನಮ್ಮ ಮನೆಯ ಬಳಿ ಬಂದಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಕಪಾಲಕ್ಕೆ ಹೊಡೆದಿದ್ದರಿಂದ ನನಗೆ ತಲೆ ದಿಮ್ ಹಿಡಿದಂತೆ ಆಗಿದ್ದರಿಂದ ರೀಮೋಟ್ ನಿಂದ ಯಾರು ಹೊಡೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಕಾರ್ತಿಕ್ ಮತ್ತು ಕೀರ್ತಿ ಮನೆಯ ಒಳಗೆ ಬಂದು ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಅಣ್ಣ ಕನಕಪುರದ ನ್ಯಾಯಾಲಯದಲ್ಲಿ ವಕೀಲ ವೃತ್ತಿ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ಅತ್ತೆಯ ಸಿವಿಲ್ ಪ್ರಕರಣಗಳನ್ನು ನನ್ನ ಅಣ್ಣನೇ ನಡೆಸಿರುತ್ತಾರೆಂದರೆ ಸರಿ. ನನ್ನ ಅಣ್ಣನ ಮಾತುಕೇಳಿ ಸಿವಿಲ್ ಪ್ರಕರಣಗಳನ್ನು ರಾಜೀ ಮಾಡಿಸಿಕೊಳ್ಳಲು ಈ ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಭಾಗದ ಸ್ವತ್ತನ್ನು ನಮ್ಮ ಅತ್ತೆಯಿಂದ ಪಡೆದುಕೊಳ್ಳಲು ಸುಳ್ಳು ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

ಎಂಒ-1 ಟಿವಿ ರೀಮೋಟ್ ನ್ನು ನಾನು ಪೊಲೀಸರಿಗೆ ಠಾಣೆಗೆ ಹೋಗಿ ನೀಡಿರುತ್ತೇನೆಂದರೆ ಸರಿಯಲ್ಲ. ನಾನು ನನ್ನ ಹೆಂಡತಿ ಮತ್ತು ನನ್ನ ಅತ್ತೆಯ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಯಾವುದೇ ಹಲ್ಲೆ ಮಾಡದೆ ಇದ್ದರೂ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಿ.17.1.2012 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನಾನು ದಿ.17.1.2012 ರಂದು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ःಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

ಓ ಹೇ ಕೇ ಸ ಇ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.